SPECIAL MOTION

Reg.–Services rendered by Sri M. Subba Rao Secretary (Retd.) Karnataka Legislature.

MR. SPEAKER.—I have received one letter from the previous Secretary which I would like to bring to the notice of the hon. House It is dated 31st October 1981.

"To-day, the 31st of October 1981, I hand over charge of the office of the Secretary, Karnataka Legislature, which I have been privileged to hold w.e.f 7th June 1980. Before I was appointed Secretary, Karnataka Legislature, I have worked in several capacities in the Legislature Secretariats at Hyderabad and Karnataka. I may be permitted on this occasion to express my profound gratitude to you for your courtesy, kindness and affection towards me. On this occassion, I thank your predecessors in office also. I further thank Hon. Chief Minister and other Ministers as well as the Former Chief Ministers and Ministers for their courtesy and kindness shown to me. I have great pleasure in thanking all the members of Legislature with whom I had very cordial relationship all along. I offer my sincere thanks to the Officers and staff of the Legislature Secretariat for their co-operation in my task throughout my service. During my stay in office it has been my earnest endeavour to discharge my duties to the best of my ability. I have taken pains to ensure that my advice to the Presiding Officers is in the best interests of the Legislature and its members as well as the good traditions set up by the Karnataka Legislature in the past. I shall pray that the Karnataka Legislature will continue the glorious traditions set up in the past and be a model to other Legislatures. Once again, I thank you all. Yours sincerely, M. Subba Rao."

SRI R. GUNDU RAO (Chief Minister).—Sir I may be permitted to move a special motion on Sri M. Subba Rao, Retired Secretary Karnataka Legislature:

SPECIAL MOTION

"That Mr. Speaker be requested to convey to Sri M. Subba Rao, B.Sc., LL.B, who retired as Secretary, Karnataka Legislature on 31/10/81, an expression of members' deep appreciation of the service which he has rendered to this House for the last 25 years in different capacities and as Secretary, Legislature, their admiration for his profound

knowledge of its procedure and practice, their gratification for the help constantly and readily given to them and their recognition of the great work he has done."

The Question was proposed.

ಶ್ರೀ ಆರ್. ಗುಂಡೂರಾವ್.—ಶ್ರೀಮಾನ್ ಎಂ. ಸುಬ್ಬರಾವ್ ಅವರು ನನಗೆ ಚೆನ್ನಾಗಿ ತಿಳಿದಂಥಾ ವ್ಯಕ್ತಿ. ನಾನು ಈ ಶಾಸನ ಸಭೆಗೆ ಸದಸ್ಯನಾಗಿ ೧೯೭೨ನೇ ಇಸವಿಯಿಂದ ಬಂದಾಗಿನಿಂದಲೂ ಸಹ ನೋಡುತ್ತಿದ್ದೇನೆ ಅವರು ಈ ಒಂದು ಶಾಸಕಾಂಗದಲ್ಲಿ ಒಳ್ಳೆಯ ಕೆಲಸವನ್ನು ಮಾಡಿಕೊಂಡು ಬರುತ್ತಾ ಇದ್ದರು ಜೊತೆಗೆ ಯಾವುದೇ ಸಂದರ್ಭದಲ್ಲಿಯಾಗಲಿ ಯಾವುದೇ ಒಂದು ಒಳ್ಳೆಯ ಸಲಹೆಯಾಗಲಿ ಅಥವಾ ನಮಗೆ ಏನೇನು ಹೊಸ ಹೊಸ ತರಹ ನಡವಳಿಕೆಗಳು ಕಾನೂನಿನ ಬಗ್ಗೆ ತಿಳಿದುಕೊಳ್ಳಬೇಕೋ ಅದರ ಬಗ್ಗೆ ಹೇಳುತ್ತಿದ್ದರು, ಅಲ್ಲದೆ ಆ ಬಗ್ಗೆ ನಾವು ಯಾವಾಗ ಕೇಳಿದರೂ ಸಹ ಯಾವುದೇ ತರಹದಲ್ಲಿ ಕೇಳಿದರೂ ಸಹ ಯಾವ ತೊಂದರೆಯೂ ಇಲ್ಲದೇ ಇದ್ದ ರೀತಿಯಲ್ಲಿ ಹೇಳುತ್ತಿದ್ದರು. ಅವರು ಕೇವಲ ಶಾಸಕರಾಗಿಯೇ ಆಗಿರಲಿ, ಮಂತ್ರಿಗಳಾಗಿಯೇ ಆಗಿರಲಿ ಅಥವಾ ಮುಖ್ಯಮಂತ್ರಿಗಳೇ ಆಗಿರಲಿ ಎಲ್ಲರಿಗೂ ಸಹ ಯಾವುದೇ ತರಹ ಪಕ್ಷಭೇದವಿಲ್ಲದೆ ಕಾರ್ಯವನ್ನು ನಡೆಸಿಕೊಂಡು ಬರುತ್ತಾ ಇದ್ದಂಥಾ ವ್ಯಕ್ತಿಯಾಗಿದ್ದರು. ಬಹುಶಃ ನಮ್ಮ ಸರ್ಕಾರ ಬಂದ ಮೇಲೆ ನಾವು ತೆಗೆದುಕೊಂಡಂಥಾ ಒಂದು ನಿರ್ಧಾರದಿಂದ ಅವರು ಕಾರ್ಯದರ್ಶಿಗಳಾಗುವುದಕ್ಕೆ ಸಾಧ್ಯವಾಯಿತು. ಯಾವುದೇ ಅಧಿಕಾರಿಗಾಗಲಿ ಎಕ್ಸ್‌ಟೆನ್‌ಷನ್ ಕೊಡುವುದಿಲ್ಲ ಎನ್ನುವ ಒಂದು ನಿರ್ಧಾರವನ್ನು ತೆಗೆದುಕೊಂಡಿರುತ್ತೇವೆ. ಈ ನಿರ್ಧಾರದ ಪರಿಣಾಮವಾಗಿ ಅನೇಕ ಜನರಿಗೆ ೨೫-೩೦ ವರ್ಷ ಕೆಲಸ ಮಾಡಿರತಕ್ಕಂಥಾ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡಿರತಕ್ಕಂಥಾ ಜನರಿಗೆ ಇದರ ಪ್ರಯೋಜನ ದೊರೆಯಿತು; ಅದೇ ರೀತಿಯಲ್ಲಿ ಲೆಜಿಸ್ಲೇಚರ್‌ನಲ್ಲೂ ಸಹ ಅನೇಕ ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿರತಕ್ಕಂಥಾವರಿಗೂ ಸಿಕ್ಕಿದೆ. ನಾವು ಹಿಂದಿನ ಸರ್ಕಾರದ ಒಂದು ನಿಲುವನ್ನೇ ಇಟ್ಟುಕೊಂಡಿದ್ದರೆ ಹಿಂದಿದ್ದವರೇ ಮುಂದುವರೆಯುತ್ತಾ ಇರುವರು. ಅವರು ಕಾರ್ಯದರ್ಶಿಯಾಗಿ ನಿವೃತ್ತಿಯಾಗಿ ಹೋಗುತ್ತಿರಲಿಲ್ಲ ; ಇದರಿಂದ ಎಲ್ಲರಿಗೂ ಗೊತ್ತಾಗುತ್ತದೆ ಯಾರಿಗಾದರೂ ಕೂಡ ತಮ್ಮ ಸರ್ವಿಸ್‌ನಲ್ಲಿ ಈ ತರಹ ಒಂದು ಅವಕಾಶವನ್ನು ಕಲ್ಪಿಸಿ ಕೊಟ್ಟರೆ ಅವರು ತಮ್ಮ ಕರ್ತವ್ಯವನ್ನು ಬಹಳ ನಿಷ್ಠೆಯಿಂದ ಕೆಲಸ ಮಾಡುತ್ತಾರೆ ಎಂದು. ಆ ರೀತಿ ಅವರೂ ಸಹ ತಿಳಿದುಕೊಂಡು ತಮ್ಮ ಕರ್ತವ್ಯವನ್ನು ಚೆನ್ನಾಗಿ ಬಹಳ ನಿಷ್ಠೆಯಿಂದ ಕೆಲಸ ಮಾಡಿದರು. ಶ್ರೀಮಾನ್ ಸುಬ್ಬರಾವ್ ಅವರಿಗೆ ಈ ಒಂದು ಸ್ಥಾನ ಸಿಕ್ಕಿದ್ದಕ್ಕೋಸ್ಕರವಾಗಿ, ಅವರು ಅದರಲ್ಲಿ ಚೆನ್ನಾಗಿ ಶ್ರದ್ಧೆ ನಿಷ್ಠೆಯಿಂದ ತಮ್ಮ ಕರ್ತವ್ಯವನ್ನು ಚೆನ್ನಾಗಿ ಮಾಡಿದ್ದರ ಪರಿಣಾಮವಾಗಿ ಅವರು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿ ಬಂದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಮೊದಲೇ ಹೇಳಿದ ಹಾಗೆ ಕೇವಲ ಆಡಳಿತ ಪಕ್ಷದವರಿಗೆ ಮಾತ್ರವಲ್ಲ ಅಥವಾ ಸರ್ಕಾರಕ್ಕೆ ಮಾತ್ರವಲ್ಲ ಎಲ್ಲಾ ಆಡಳಿತ ಪಕ್ಷ, ವಿರೋಧ ಪಕ್ಷ ಮತ್ತು ಎಲ್ಲಾ ಮಾನ್ಯ ಸದಸ್ಯರ ಮೆಚ್ಚಿಗೆಯನ್ನು ಅವರು ಪಡೆದಿದ್ದಾರೆ. ಅವರಿಗೆ ಕೊಟ್ಟಂತಹ ಜವಾಬ್ದಾರಿಕೆಯನ್ನು ಬಹಳ ದಕ್ಷತೆಯಿಂದ ಹಾಗೂ ಬಹಳ ನಂಬಿಕೆಯಿಂದ ಎಲ್ಲರಿಗೂ ತೃಪ್ತಿಯಾಗುವ ರೀತಿಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಅವರು ಕೇವಲ ಸ್ವಲ್ಪ ಸಮಯ ಮಾತ್ರ ಕಾರ್ಯದರ್ಶಿಯಾಗಿದ್ದರು. ಆದರೆ ಅವರ ಮನಸ್ಸಿಗೆ ಏನು ತೃಪ್ತಿಯಾಗಿದೆ ಎಂದರೆ, 'ನಾನೂ ಸಹ ಕಾರ್ಯದರ್ಶಿಯಾಗಿ ನಿವೃತ್ತನಾದೆನಲ್ಲಾ' ಎನ್ನತಕ್ಕಂಥ ತೃಪ್ತಿ ಆಗಿದೆ. ಇದು ಅವರ ಮನಸ್ಸಿಗೆ ಆಗಿರುವಂಥ ಸಂತೋಷ ಕೂಡ. ಆದ್ದರಿಂದ ಅವರು ಸಲ್ಲಿಸಿದಂಥ ಒಳ್ಳೆಯ ಸೇವೆಯನ್ನು ನಾವೆಲ್ಲರೂ ಇವತ್ತಿನ ದಿವಸ ನೆನೆಸಿಕೊಳ್ಳಬೇಕು ಮತ್ತು ಅವರಿಗೆ ನಮ್ಮ ಕೃತಜ್ಞತೆಯನ್ನು ನಾವೆಲ್ಲರೂ ಈ ಸದನದ ಮೂಲಕ ಒಮ್ಮತದಿಂದ ಸಲ್ಲಿಸಬೇಕು ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಆರ್ ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರು ಈ ದಿವಸ ಇಲ್ಲಿ ಮಂಡಿಸಿದ ಈ ನಿರ್ಣಯಕ್ಕೆ ನಾನು ಬೆಂಬಲ ಕೊಡುತ್ತಾ ಅವರು ವ್ಯಕ್ತ ಮಾಡಿದ ಭಾವನೆಗಳಲ್ಲಿ ನಾನೂ ಪಾಲ್ಗೊಳ್ಳುತ್ತಿದ್ದೇನೆ. ನಾನೂ ಕೂಡ ಮಾನ್ಯ ಸುಬ್ಬರಾಯರನ್ನು ಈ ಶಾಸನ ಸಭೆಗೆ ಬಂದಾಗಿನಿಂದಲೂ ಬಲ್ಲೆ. ಅವರು ಈ ಶಾಸಕಾಂಗದ ಕಚೇರಿಯಲ್ಲಿ ಬೇರೆ ಬೇರೆ ಹುದ್ದೆಗಳಲ್ಲಿ ಕೆಲಸ ಮಾಡಿ ಆನಂತರ ಉಚ್ಚ ಹುದ್ದೆಯಾದ ಕಾರ್ಯದರ್ಶಿಗಳಾಗಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. ಶ್ರೀಮಾನ್ ಸುಬ್ಬರಾವ್‌ರವರು ಈ ಶಾಸಕಾಂಗದ ನಿಯಮಗಳನ್ನು ಹಾಗೂ ನಡವಳಿಕೆಗಳನ್ನೂ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಶಾಸನ ಸಭೆ, ಲೋಕಸಭೆ ಮತ್ತು ಪಾರ್ಲಿಮೆಂಟ್ಸ್ ವ್ಯವಹಾರ

† Indicates that remarks or speeches have not been revised by the member concerned.

ಗಳನ್ನು ಬಹಳ ಆಳವಾಗಿ ಅಧ್ಯಯನ ಮಾಡಿ ಜ್ಞಾನವನ್ನು ಪಡೆದುಕೊಂಡಂಥ ವ್ಯಕ್ತಿಗಳು. ಮಾನ್ಯ ಸದಸ್ಯರುಗಳಿಗೆ ಕೂಡ ತಿಳಿವಳಿಕೆಯನ್ನು ಅಥವಾ ಸಲಹೆಯನ್ನು ಕೊಡುವಾಗ ಬಹಳ ಸಹಾಯಕ ಮನೋವೃತ್ತಿ ಅವರದಾಗಿತ್ತು. ಅಲ್ಲದೇ ಈ ಸಭೆಯಲ್ಲಿ ತಾವು ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಪಕ್ಷಭೇದವಿಲ್ಲದೇ ನ್ಯಾಯವಾಗಿ ಈ ಸಭೆಯ ನಡೆವಳಿಕೆಗಳನ್ನು ನಡೆಸಿಕೊಂಡು ಹೋಗ ತಕ್ಕಂಥಾದರಲ್ಲಿ ಸಲಹೆಗಳನ್ನು ಕೊಡುವಾಗ ಬಹಳ ಸಮತೋಲನ ಬುದ್ಧಿಯಿಂದ ಸಲಹೆಗಳನ್ನು ಕೊಡತಕ್ಕಂಥವರಾಗಿದ್ದರು; ಅಲ್ಲದೇ ಯಾವಾಗಲೂ ಅವರು ಶಾಸಕರನ್ನು ಮತ್ತು ಬೇರೆ ಜನರನ್ನು ನಗುನಗುತ್ತಾ ಸ್ವಾಗತ ಮಾಡುತ್ತಿದ್ದರು. ಹೀಗೆ ಎಲ್ಲರಿಗೂ ತೃಪ್ತಿಯಾಗುವ ರೀತಿಯಲ್ಲಿ ಉತ್ತಮ ಸೇವೆ ಸಲ್ಲಿಸಿದಂಥ ಶ್ರೀಮಾನ್ ಸುಬ್ಬರಾವ್ ರವರಿಗೆ ಈ ಮನೆಯ ಸದಸ್ಯರೆಲ್ಲರೂ ಅಭಿನಂದನೆಗಳನ್ನು ಸಲ್ಲಿಸುವುದು ಯೋಗ್ಯವಾಗಿದೆ. ನಾನು ಈ ಒಂದು ನಿರ್ಣಯಕ್ಕೆ ಅನುಮೋದನೆಯನ್ನು ಕೊಡುತ್ತಾ ಅವರ ಒಂದು ನಡವಳಿಕೆಯನ್ನು ಮಾತ್ರ ಇಲ್ಲಿ ಹೇಳಬಯಸುತ್ತೇನೆ ಅವರು ಇಲ್ಲಿ ಸೆಕ್ರೆಟರಿಗಳಾದ ಮೇಲೆ ಒಂದು ಕಾರು ಮತ್ತು ಸಿಬ್ಬಂದಿ ವರ್ಗವನ್ನು ಕೊಟ್ಟರೂ ಕೂಡ ಕಚೇರಿಯಿಂದ ಮನೆಗೆ ಹೋಗುವಾಗ ಅಥವಾ ಮನೆಯಿಂದ ಕಚೇರಿಗೆ ಬರುವಾಗ ಒಂದು ದಿವಸವೂ ಅದನ್ನು ಉಪಯೋಗ ಮಾಡಲಿಲ್ಲ. ಇಂತಹ ಒಂದು ಉಚ್ಚ ಮಟ್ಟದ ನಡವಳಿಕೆಯನ್ನು ಅವರು ತೋರಿಸಿದ್ದಾರೆ. ಆದ್ದರಿಂದ ಅವರಿಗೆ ನಾವೆಲ್ಲರೂ ಅಭಿನಂದನೆಗಳನ್ನು ಸಲ್ಲಿಸುವುದು ಯೋಗ್ಯವಾಗಿದೆ. ಈ ನಿರ್ಣಯಕ್ಕೆ ನಾನು ಸಂಪೂರ್ಣ ಬೆಂಬಲವನ್ನು ಕೊಡುತ್ತಿದ್ದೇನೆ.

ಅಧ್ಯಕ್ಷರು.—ಈ ಒಂದು ನಿರ್ಣಯವನ್ನು ಈ ಸಭೆಯಲ್ಲಿ ಮತಕ್ಕೆ ಹಾಕುವುದಕ್ಕೆ ಮುಂಚೆ ನಾನಂ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಮನೆಯ ನಾಯಕರು ಮತ್ತು ಶ್ರೀ ಬೊಮ್ಮಾಯಿಯವರು ಮಾನ್ಯ ಸುಬ್ಬರಾವ್‌ರವರ ಬಗ್ಗೆ ಮಾತನಾಡಿದ್ದಾರೆ. ಅವರ ಜೊತೆಗೆ ನನ್ನ ಧನಿಯನ್ನೂ ಕೂಡಿಸುತ್ತಿದ್ದೇನೆ. ನಾನು ಅವರನ್ನು ಸುಮಾರು ೧೯೫೭ನೇ ಇಸವಿಯಿಂದ ಅತಿನಿಕಟವರ್ತಿಯಾಗಿ ಬಲ್ಲೆ ಮತ್ತು ಅಷ್ಟೇ ಅಲ್ಲದೇ ಅವರು ನಮ್ಮ ಜಿಲ್ಲೆಯ ಅಳಿಯಂದಿರು ಕೂಡ ಆಗಿ ಇನ್ನೂ ಹೆಚ್ಚಿನ ಬಾಂಧವ್ಯ ಬಂದಿರುವ ವಿಷಯ ಗೊತ್ತಿದೆ. ನಾನು ಇಲ್ಲಿ ಅಧ್ಯಕ್ಷನಾದ ಮೇಲೆ ಈ ಒಂದು ಕೆಲಸವನ್ನು ಮಾಡತಕ್ಕಂಥ ಸಂದರ್ಭದಲ್ಲಿ ನನಗೆ ವೈಯಕ್ತಿಕವಾಗಿ ಕೂಡ ಈ ಸಭೆಯ ನಡವಳಿಕೆಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವುದಕ್ಕೆ ಅವರು ಬಹಳ ಸಹಾಯ ಮಾಡಿದ್ದಾರೆ. ಈ ಒಂದು ಕೆಲಸವನ್ನು ಇಲ್ಲಿ ನಿರ್ವಹಣೆ ಮಾಡುವಾಗ ಈಗಾಗಲೇ ಪ್ರಸ್ತಾಪ ಮಾಡಿದಂತೆ ಅವರು ಯಾವುದೇ ಪಕ್ಷಭೇದವನ್ನು ಇಟ್ಟುಕೊಳ್ಳದೇ ಈ ಮನೆಯ ಕಾರ್ಯಕಲಾಪಗಳು ಯಾವರೀತಿಯಲ್ಲಿ ನಡೆದರೆ ಅದು ಮಾರ್ಗದರ್ಶನವಾಗುವುದಕ್ಕೆ ಅನುಕೂಲವಾಗುತ್ತದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಅವರು ಕೆಲಸ ಮಾಡಿದ್ದನ್ನು ನಾವೆಲ್ಲಾ ನೋಡಿದ್ದೇನೆ. ನಮ್ಮೆಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದಂಥ ಶ್ರೀಮಾನ್ ಸುಬ್ಬರಾವ್ ರವರು ಕಾರ್ಯದರ್ಶಿಗಳಾಗಿ ೧೯೮೧ನೇ ಇಸವಿ ಆಕ್ಟೋಬರ್ ಮಾಹೆ ೩೧ನೇ ತಾರೀಖಿನ ದಿವಸ ನಿವೃತ್ತರಾಗಿದ್ದಾರೆ. ಅವರನ್ನು ನೋಡಿದಾಗ ನನಗೆ ಏನು ಅನ್ನಿಸುತ್ತಿತ್ತು ಎಂದರೆ, ಅವರಿಗೆ ನಿವೃತ್ತಿ ಆಗುವಾಗ ೫೫ ವರ್ಷ ವಯಸ್ಸು ಆಗಿದೆಯೇ ಇಲ್ಲವೇ ಎಂದು ಅನ್ನಿಸುತ್ತಿತ್ತು. ಅಷ್ಟರ ಮಟ್ಟಿಗೆ ಒಳ್ಳೆಯ ಆರೋಗ್ಯವನ್ನು ಕಾಪಾಡಿಕೊಂಡಿದ್ದಂತಹ ವ್ಯಕ್ತಿ ಅವರು. ಇವತ್ತಿಗೂ ಕೂಡ ಅವರ ಸೇವೆ ಬೇರೆ ರೂಪದಲ್ಲಿ ಈ ಸಮಾಜಕ್ಕಾಗಲೀ ಅಥವಾ ಈ ಸರ್ಕಾರಕ್ಕಾಗಲೀ ಅವಶ್ಯಕವಾಗುವ ರೀತಿಯಲ್ಲಿ ಅವರ ಆರೋಗ್ಯ ಇದೆ. ಅವರಿಗೆ ಇನ್ನೂ ಹೆಚ್ಚಿನ ಆರೋಗ್ಯ ಮತ್ತು ಇನ್ನೂ ಹೆಚ್ಚು ಕಾಲ ಧೀರ್ಘಾಯುಸ್ಸು ದೊರೆಯಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಾ, ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಏನೊಂದು ನಿರ್ಣಯವನ್ನು ಮಂಡಿಸಿದ್ದಾರೆಯೋ ಅದಕ್ಕೆ ನನ್ನ ಬೆಂಬಲವನ್ನು ಕೂಡ ತ್ತಾ ಈ ನಿರ್ಣಯವನ್ನು ಈ ಸಭೆಯ ಮತಕ್ಕೆ ಹಾಕುತ್ತಿದ್ದೇನೆ.

The question is :

"That Mr. Speaker be requested to convey to Sri M. Subba Rao, B.Sc., LL.B., on his retirement from the office of the Secretary, Karnataka Legislature, an expression of Members' deep appreciation of the service which he has rendered to this House for the last 25 years in different capacities and as Secretary, Legislature, their admiration for his profound knowledge of its procedure and practice, their gratification for the help constantly and readily given to them and their recognition of the great work he has done."

The motion was adopted.